# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.443/2019

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | : ಜಿ ಎನ್ ಮಾಲತೇಶಪ್ಪ | ಚಾಸಾಃ **13** ಫ್ರಾಸಾಃ **2** |
| **ತಂದೆಯ ಹೆಸರು** | : ಆರ್ ಜಿ ನೀಲಕಂಠಪ್ಪ | |
| **ವಯಸ್ಸು** | : 62 ವರ್ಷ | |
| **ವೃತ್ತಿ** | : ನಿವೃತ್ತ ಪಿ. ಎಸ್. ಐ | |
| **ವಾಸಸ್ಥಳ** | : ಹೊನ್ನಾಳಿ | |

ದಿನಾಂಕಃ **10-02-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ನಾನು **2017** ರಿಂದ ಮೇ **2022** ರವರೆಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನು .

ದಿಃ 01-04-2018 ರಂದು ನಾನು ಠಾಣೆಯಲ್ಲಿರುವಾಗ ಚಾಸಾ-14 ರವರು ಈ ಪ್ರಕರಣದ 1 ನೇ ಆರೋಪಿಯನ್ನು ಮತ್ತು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚ್ ಗಳನ್ನು ಮತ್ತು ರೂ.300/- ನಗದು ಹಣವನ್ನು ಪಡೆದುಕೊಂಡು ನಂತರ ಮಧ್ಯದ ಪೌಚ್ ಗಳನ್ನು ಮತ್ತು ಹಣವನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ-2 ರಿಂದ 6, 8 ರಿಂದ 10 ರವರ ಹೇಳಿಕೆಗಳನ್ನು ಮತ್ತು ಮುಚ್ಚಳಿಕೆ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಚಾಸಾ-12 ರವರ ಮುಖಾಂತರ ಚಾಸಾ-7 ರವರಿಗೆ

ರಹದಾರಿ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆ. 1 ನೇಆರೋಪಿ ಗೈರುಹಾಜರಾಗಿದ್ದು ಆತನನ್ನು ಗುರುತಿಸುವ ಬಗ್ಗೆ ಆತನ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 45 ಖಾಲಿ ಬ್ಯಾಕ್ ಪೈಪರ್ ವಿಸ್ಕಿ ಪೌಚ್ ಗಳನ್ನು ಮತ್ತು 145 ಹೈವರ್ಸ್ಡ್ ಚಿಯರ್ಸ್ ವಿಸ್ಕಿ ಪೌಚ್ ಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ರೂ.300/- ಹಣವನ್ನು ಮು.ಮಾ.3 ಎಂದು ಗುರುತಿಸಲಾಯಿತು.

ಚಾಸಾ-4 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಚಾಸಾ-4 ರವರ ಹೇಳಿಕೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ರಹದಾರಿ ಪತ್ರವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಚಾಸಾ-11 ರವರು ನೀಡಿದ ಕೃತ್ಯ ನಡೆದ ಸ್ಥಳದ ವರದಿ ಮತ್ತು ಕರಆಕರಣೆ ರಿಜಿಸ್ಟರ್ ಅನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಚಾಸಾ-2 ಮತ್ತು 3 ರವರಿಗೆ ನೀಡಿದ ನೋಟೀಸನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಚಾಸಾ-5 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು, ಚಾಸಾ-6 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-</u>

ನಾನು ದಾಳಿಯ ಸಮಯದಲ್ಲಿ ಯಕ್ಕನಹಳ್ಳಿ ಗ್ರಾಮಕ್ಕೆ ಹೋಗಿರುವುದಿಲ್ಲ. ಚಾಸಾ-14 ರವರು ಈ ಪ್ರಕರಣದ 1 ನೇ ಆರೋಪಿಯನ್ನು ಮತ್ತು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚ್ ಗಳನ್ನು ಮತ್ತು ರೂ.300/- ನಗದು ಹಣವನ್ನು ಪಡೆದುಕೊಂಡು ನಂತರ ಮಧ್ಯದ ಪೌಚ್ ಗಳನ್ನು ಮತ್ತು ಹಣವನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರಿಂದ 6, 8 ರಿಂದ 10 ರವರ ಹೇಳಿಕೆಗಳನ್ನು ಮತ್ತು ಮುಚ್ಚಳಿಕೆ ಪತ್ರಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಚಾಸಾ-12 ರವರ ಮುಖಾಂತರ ಚಾಸಾ-7 ರವರಿಗೆ ರಹದಾರಿ ಪತ್ರದೊಂದಿಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಮು.ಮಾ.1

ಮತ್ತು 2 ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ದೊರೆಯುತ್ತದೆ ಎಂದರೆ ಸರಿ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.